ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 07-02-1980. **(विचित्र राज्य दरबार)**

# *ವಿಚಿತ್ರ ರಾಜ್ಯಸಭೆ*

ಬಾಪ್ ದಾದಾರವರು ಎಲ್ಲಾ ಮಕ್ಕಳಲ್ಲಿನ ರೂಪ-ಭಸಂತ(ಜ್ಞಾನ ಮತ್ತು ಸ್ವರೂಪ) ಎರಡರ ಸಮತೋಲನವನ್ನೂ ನೋಡುತ್ತಿದ್ದಾರೆ. ಜ್ಞಾನಿಯಾಗಬೇಕು ಮತ್ತು ಸ್ವರೂಪದಲ್ಲಿ ಸ್ಥಿತರಾಗಿರುವುದರಲ್ಲಿ ಸಮಾನತೆಯಿದೆಯೇ? ಭಸಂತ ಅರ್ಥಾತ್ ಹೇಗೆ ವಾಣಿಯಲ್ಲಿ ಬರುವ ಅಭ್ಯಾಸವು ಬಹಳಷ್ಟಿದೆ. ಹಾಗೆಯೇ ವಾಣಿಯಿಂದ ದೂರವಾಗುವ ಅಭ್ಯಾಸವಿದೆಯೇ? ಸರ್ವಕರ್ಮೇಂದ್ರಿಯಗಳ ಕರ್ಮದ ಸ್ಮೃತಿಯಿಂದ ಅತೀತರಾಗುವುದು - ಈ ಒಂದೇ ಅತ್ಮಿಕ ಸ್ವರೂಪದಲ್ಲಿ ಸ್ಥಿತರಾಗಬಲ್ಲಿರಾ? ಕರ್ಮವು ಸೆಳೆಯುತ್ತದೆಯೇ ಅಥವಾ ಕರ್ಮಾತೀತ ಸ್ಥಿತಿಯು ಸೆಳೆಯುತ್ತದೆಯೇ ನೋಡುವುದು, ಕೇಳುವುದು, ತಿಳಿಸುವ ಈ ವಿಶೇಷ ಕರ್ಮವು ಯಾವ ರೀತಿ ಸಹಜ ಅಭ್ಯಾಸವಾಗಿಬಿಟ್ಟಿದೆಯೋ, ಹಾಗೆಯೇ ಕರ್ಮಾತೀತರಾಗುವ ಸ್ಟೇಜ್ ಅರ್ಥಾತ್ ಕರ್ಮವನ್ನು ಸಂಕ್ಷಿಪ್ತಗೊಳಿಸುವ ಶಕ್ತಿಯಿಂದ ಅಕರ್ಮಿ ಅರ್ಥಾತ್ ಕರ್ಮಾತೀತರಾಗಲು ಸಾಧ್ಯವಿದೆಯೇ? ಒಂದು - ಕರ್ಮದ ಆಧೀನ ಸ್ಥಿತಿ, ಇನ್ನೊಂದು ಕರ್ಮಾತೀತ ಅರ್ಥಾತ್ ಕರ್ಮ-ಅಧಿಕಾರಿ ಸ್ಥಿತಿ, ಯಾವ ಸ್ಥಿತಿಯಲ್ಲಿ ಹೆಚ್ಚು ಸಮಯ ಇರುತ್ತೀರಿ? ಬಾಪ್‌ದಾದಾರವರು ಪ್ರತಿಯೊಬ್ಬ ಸಂಗಮಯುಗಿ ಕರ್ಮೇಂದ್ರೀಯಾಜೀತ್ ಸ್ವರಾಜ್ಯಧಾರಿ, ರಾಜ್ಯಧಿಕಾರಿ ಆತ್ಮರೊಂದಿಗೆ ಕೇಳುತ್ತಾರೆ - ಪ್ರತಿಯೊಬ್ಬರ ರಾಜ್ಯಸಭೆಯು ಸರಿಯಾಗಿ ನಡೆಯುತ್ತಿದೆಯೇ? ಪ್ರತಿಯೊಬ್ಬ ರಾಜ್ಯಧಿಕಾರಿಯು ತನ್ನ ರಾಜ್ಯದರ್ಬಾರನ್ನು ಮಾಡುತ್ತೀರಾ? ರಾಜ್ಯದರ್ಬಾರಿನಲ್ಲಿ ರಾಜ್ಯದ ಕಾರ್ಯಕರ್ತರು, ತನ್ನ ಕಾರ್ಯದ ಫಲಿತಾಂಶವನ್ನು ಕೊಡುತ್ತಾರೆ. ಪ್ರತಿಯೊಬ್ಬರ ಕಾರ್ಯಕರ್ತರೂ ಸಹ ತಾವು ಸ್ವರಾಜ್ಯಧಿಕಾರಿಯ ಆದೇಶದಂತೆ ಇರುತ್ತಾರೆಯೇ? ಯಾವುದೇ ಕಾರ್ಯಕರ್ತನೂ ಸಹ ತನ್ನ ಇಚ್ಛೆ ಅಥವಾ ಯಾವುದೇ ಪ್ರಕಾರದ ಕಿರಿಕಿರಿ ಮಾಡುತ್ತಿಲ್ಲವೇ? ತಾವು ರಾಜ್ಯಧಾರಿಗೆಂದಿಗೂ ಮೋಸವನ್ನಂತು ಮಾಡುತ್ತಿಲ್ಲವೇ? ರಾಜ್ಯದ ಕಾರ್ಯಕರ್ತನು ಆದೇಶದಂತೆ ನಡೆಯುವುದಕ್ಕೆ ಬದಲು ತಮ್ಮನ್ನು ನಡೆಸಲು ಪ್ರಾರಂಭಿಸುವುದಿಲ್ಲವೇ? ರಾಜ್ಯಧಿಕಾರಿಗಳ ರಾಜ್ಯವಿದೆಯೇ ಅಥವಾ ಪ್ರಜೆಗಳ ರಾಜ್ಯವಿದೆಯೇ? ಈ ರೀತಿಯಾಗಿ ಪರಿಶೀಲನೆ ಮಾಡುತ್ತೀರಾ ಅಥವಾ ಶತ್ರುವು ಬಂದಾಗ ಜಾಗೃತರಾಗುತ್ತೀರಾ? ಪ್ರತಿನಿತ್ಯವೂ ತಮ್ಮ ದರ್ಬಾರನ್ನು ಮಾಡುತ್ತೀರಾ ಅಥವಾ ಕೇವಲ ಕೆಲವೊಮ್ಮೆ ದರ್ಬಾರನ್ನು ಮಾಡುತ್ತೀರಾ? ತಾವು ರಾಜ್ಯದರ್ಬಾರಿಗಳ ಸ್ಥಿತಿಗತಿಯೇನಿದೆ? ರಾಜ್ಯವ್ಯವಹಾರವು ಸರಿಯಾಗಿದೆಯೇ? ಇನ್ನೂ ಗಮನವನ್ನು ಕೊಡುತ್ತೀರಾ? ಈಗಿನ ರಾಜನೇ( ಸ್ವರಾಜ್ಯಾಧಿಕಾರಿ) ಜನ್ಮ-ಜನ್ಮಾಂತರದ ರಾಜನಾಗುವನು. ತಮ್ಮ ದಾಸಿಗಳು (ಕರ್ಮೇಂದ್ರಿಯ) ಕಾರ್ಯವನ್ನು ಸರಿಯಾಗಿ ಮಾಡುತ್ತಿದೆಯೇ? ಎಲ್ಲದಕ್ಕಿಂತ ಅತಿದೊಡ್ಡ ದಾಸಿಯು ಪ್ರಕೃತಿಯಾಗಿದೆ. ಪ್ರಕೃತಿಯೆಂಬ ದಾಸಿಯು ಕಾರ್ಯವನ್ನು ಸರಿಯಾಗಿ ಮಾಡುತ್ತಿದೆಯೇ? ಪ್ರಕೃತಿಜೀತನ ಆದೇಶದನುಸಾರವಾಗಿ ಕಾರ್ಯವನ್ನು ಮಾಡುತ್ತಿದೆಯೇ? ಪ್ರಕೃತಿಜೀತನು ಪ್ರಕೃತಿಯ ಆದೇಶದಲ್ಲಂತು ಬರುತ್ತಿಲ್ಲ ತಾನೆ? ತಮ್ಮ ರಾಜ್ಯಸಭೆಯ ಮುಖ್ಯವಾದ 8 ಸಹಯೋಗಿ ಶಕ್ತಿಗಳು, ತಮ್ಮ ಕಾರ್ಯದಲ್ಲಿ ಸಹಯೋಗವನ್ನು ಕೊಡುತ್ತಿದೆಯೇ? *ರಾಜ್ಯಸಭೆಯ ಶೋಭೆಯು ಈ ಅಷ್ಟಶಕ್ತಿಗಳಾಗಿವೆ ಅರ್ಥಾತ್ ಅಷ್ಟರತ್ನ, ಅಷ್ಟಸಹಯೋಗಿಗಳಾಗಿವೆ* , ಈ ಎಂಟೂ ಶಕ್ತಿಗಳು ಸರಿಯಾಗಿದೆಯೇ? ತಮ್ಮ ಫಲಿತಾಂಶವನ್ನು ಪರಿಶೀಲನೆ ಮಾಡಿರಿ. ರಾಜ್ಯದ ವ್ಯವಹಾರವನ್ನು ನಡೆಸುವುದು ಬರುತ್ತದೆಯೇ? ಒಂದುವೇಳೆ ರಾಜ್ಯಾಧಿಕಾರಿಯು ಹುಡುಗಾಟಿಕೆಯ ನಿದ್ರೆಯಲ್ಲಿ ಅಥವಾ ಅಲ್ಪಕಾಲದ ಪ್ರಾಪ್ತಿಯ ನಶೆಯಲ್ಲಿ ಅಥವಾ ವ್ಯರ್ಥಸಂಕಲ್ಪದ ನೃತ್ಯದಲ್ಲಿ ಮಸ್ತರಾಗಿದ್ದರೆ, ಸಮಯದಲ್ಲಿ ಸಹಯೋಗಿ ಶಕ್ತಿಗಳೂ ಸಹ ಸಹಯೋಗವನ್ನು ಕೊಡುವುದಿಲ್ಲ. ಅಂದಮೇಲೆ ಫಲಿತಾಂಶವೇನೆಂದು ತಿಳಿಯುವಿರಿ? ಬಾಪ್‌ದಾದಾರವರು ಇತ್ತೀಚೆಗೆ ಪ್ರತಿಯೊಂದು ಮಕ್ಕಳ ಭಿನ್ನ ಭಿನ್ನ ಫಲಿತಾಂಶವನ್ನು ಪರಿಶೀಲಿಸುತ್ತಿದ್ದರು. ತಾವು ತಮ್ಮ ಫಲಿತಾಂಶವನ್ನೂ ಸಹ ಪರಿಶೀಲಿಸುತ್ತೀರಾ? ಮೊದಲನೆಯದಾಗಿ ಸಂಕಲ್ಪ ಶಕ್ತಿ, ನಿರ್ಣಯ ಶಕ್ತಿ ಮತ್ತು ಸಂಸ್ಕಾರ ಶಕ್ತಿ ಈ ಮೂರೂ ಶಕ್ತಿಗಳು ಆದೇಶದಂತೆ ಇವೆಯೇ? ಹಾಗೂ 8 ಶಕ್ತಿಗಳೂ ಆದೇಶದಂತೆ ಇವೆಯೇ? ಈ

ಮೂರುಶಕ್ತಿಗಳು ಮಹಾಮಂತ್ರಿಗಳಾಗಿವೆ ಅಂದಮೇಲೆ ಮಂತ್ರಿಮಂಡಲವು ಸರಿಯಾಗಿದೆಯೇ ಅಥವಾ ಚಂಚಲವಾಗುತ್ತದೆಯೇ? ತಮ್ಮ ಮಂತ್ರಿಗಳೂ ಸಹ ದಳ ಬದಲಾಯಿಸುತ್ತಿಲ್ಲ ತಾನೆ? ಕೆಲವೊಮ್ಮೆ ಮಾಯೆಯ ಮಗುವಂತು ಆಗುತ್ತಿಲ್ಲ ತಾನೆ?

***ಪರಮಾತ್ಮನ ಉಡುಗೊರೆಯಲ್ಲಿ ನನ್ನದೆನ್ನುವ ಅಧಿಕಾರವನ್ನಿಡುವುದು.***

ಒಂದುವೇಳೆ ಈಗಿನವರೆಗೂ ನಿಯಂತ್ರಿಸುಕೊಳ್ಳುವ ಶಕ್ತಿಯಿಲ್ಲದಿದ್ದರೆ ಅಂತಿಮ ಫಲಿತಾಂಶದಲ್ಲೇನಾಗುತ್ತದೆ? ಫೈನ್ ತುಂಬುವುದಕ್ಕಾಗಿ ಧರ್ಮರಾಜಪುರಿಯಲ್ಲಿ ಹೋಗಬೇಕಾಗುತ್ತದೆ, ಈ ಶಿಕ್ಷೆಗಳು ಫೈನ್ ಆಗಿದೆ. ರಿಫೈನ್ ಆಗಿಬಿಟ್ಟರೆ ಫೈನ್ ತುಂಬಬೇಕಾಗುವುದಿಲ್ಲ. ಈಗಿನಿಂದಲೇ ಯಾರ ರಾಜ್ಯಸಭೆಯು ಸರಿಯಾಗಿದೆಯೋ ಅವರು ಧರ್ಮರಾಜನ ದರ್ಬಾರಿನಲಿ ಹೋಗುವುದಿಲ್ಲ. ಅವರನ್ನು ಧರ್ಮರಾಜನೂ ಸ್ವಾಗತ ಮಾಡುವನು. ಇನ್ನು ಮುಂದೆ ಮಾಡುವುದಿಲ್ಲ. ಮಾಡುವುದಿಲ್ಲ ಎಂದು ಮತ್ತೆ-ಮತ್ತೆ ಹೇಳಬೇಕಾಗುತ್ತದೆ. ತಮ್ಮ ಅಂತಿಮ ನಿರ್ಣಯವನ್ನು ಮಾಡಿದ್ದೀರಾ- ಈಗಲೂ ಫೈಲುಗಳ ಭಂಡಾರವು ತುಂಬಿದೆಯೇ? ಖಾತೆಯು ಕ್ಲಿಯರ್ ಆಗಿದೆಯೋ ಅಥವಾ ಇದನ್ನು ಮಾಡಿಲ್ಲ. ಇದನ್ನು ಮಾಡಿಲ್ಲವೆಂಬ ಫೈಲುಗಳು ಈಗಲೂ ಮಸ್ತಕವೆಂಬ ಮೇಜಿನ ಮೇಲೆ ಉಳಿದುಕೊಂಡಿದೆಯೇ? ಇದನ್ನು ಮಾಡಬೇಕು, ಇದು ಬೇಕೆಂಬ ಫೈಲುಗಳಂತು ಇಲ್ಲವಲ್ಲ? ಹಳೆಯ ವರ್ಷದ ಜೊತೆಗೆ ಹಳೆಯ ಖಾತೆಗಳನ್ನು ಸಮಾಪ್ತಿ ಮಾಡಿದ್ದೀರಾ! ಅಥವಾ ಈ ಹಳೆಯ ಖಾತೆಗಳನ್ನು ಹೊಸವರ್ಷದಲ್ಲಿಯೂ ಜಮಾ ಮಾಡುತ್ತಾ ದೊಡ್ಡ ಖಾತೆಯನ್ನಾಗಿ ಮಾಡಿದ್ದೀರಾ? ಏನು ಮಾಡಲಾಗಿದೆ? ವರ್ಷದ ಪರಿವರ್ತನೆಯಾಯಿತು, ಸಂಸ್ಕಾರವೂ ಪರಿವರ್ತನೆಯಾಯಿತು, ಒಂದುವೇಳೆ ಈಗಿನವರೆಗೂ ಹಳೆಯ ಖಾತೆಗಳ ಲೆಕ್ಕಾಚಾರವನ್ನೇ ಸಮಾಪ್ತಿಗೊಳಿಸದೆ ಹೆಚ್ಚಿಸುತ್ತಾ ನಡೆಯುತ್ತೀರೆಂದರೆ, ಫಲಿತಾಂಶವೇನಾಗುತ್ತದೆ! ಹಳೆಯಖಾತೆಯನ್ನೆಷ್ಟು ನಡೆಸುತ್ತಾ ಇರುತ್ತೀರಿ, ಅಷ್ಟೇ ಚೀರಾಡಬೇಕಾಗುತ್ತದೆ, ಈ ಚೀರಾಟವು ಬಹಳ ದೊಡ್ಡ ನರಳಾಟವಾಗಿದೆ, ಆಗ ಒಂದೊಂದು ಸೆಕೆಂಡ್ ಒಂದು ವರ್ಷದ ಸಮಾನವಾಗಿ ಅನುಭವವಾಗುತ್ತದೆ. ಆದ್ದರಿಂದ ಈಗಲೂ ಶಿವಮಂತ್ರದ ಮೂಲಕ ಅದನ್ನು ಸಮಾಪ್ತಿಗೊಳಿಸಿಬಿಡಿ, ಈಗ ಹಲವರ ಖಾತೆಯು ಭಸ್ಮವಾಗಿಲ್ಲ, ಈಗಲೂ ಅದನ್ನೇ ನಡೆಸುತ್ತಿದ್ದಾರೆ. ಈಗಲೂ ಹಲವರ ಮೂರು ಶಕ್ತಿಗಳು ತಂದೆಯ ಸರ್ವ ಖಜಾನೆಯಲ್ಲಿ ನನ್ನದೆನ್ನುತ್ತಿದ್ದಾರೆ. ಎಂದು ತಿಳಿಸಿದ್ದೇವಲ್ಲವೆ. ತಂದೆಯು ಖಜಾನೆಗಳನ್ನು ಕೊಟ್ಟಿದ್ದಾರೆ, ಅದನ್ನು ಸ್ವಕಲ್ಯಾಣಕ್ಕಾಗಿ ಮತ್ತು ವಿಶ್ವಕಲ್ಯಾಣಕ್ಕಾಗಿ ಉಪಯೋಗಿಸಲು ಕೊಟ್ಟಿದ್ದಾರೆ ಆದರೆ ವ್ಯರ್ಥದಕಡೆ ಉಪಯೋಗಿಸುವುದು, ಅಕಲ್ಯಾಣದ ಕಾರ್ಯದಲ್ಲಿ ಉಪಯೋಗಿಸುವುದು ಇದು ತಂದೆಯ ಉಡುಗೊರೆಯನ್ನೇ ನನ್ನದೆನ್ನುವುದಾಗುತ್ತಿದೆ. ಶ್ರೀಮತದ ಜೊತೆಗೆ ಪರಮತ ಮತ್ತು ಜನಮತದ ಮಿಕ್ಸ್ ಆಗುತ್ತಿದೆ. ಹೀಗೆ ಮಿಕ್ಸ್ ಮಾಡುವುದರಲ್ಲಿಯೂ ಬಹಳ ಬುದ್ಧಿವಂತರಾಗಿದ್ದಾರೆ, ತನ್ನ ರೂಪವನ್ನು ಹೀಗಿಡುತ್ತಾರೆ ಹೇಗೆಂದರೆ ಇದು ಶ್ರೀಮತವಾಗಿದೆ ಎನ್ನುವಂತೆ, ಶಬ್ದಗಳನ್ನೂ ಮುರಳಿಯ ಶಬ್ದಗಳನ್ನೇ ತೆಗೆದುಕೊಳ್ಳುತ್ತಾರೆ ಆದರೆ ಅದರ ಅಂತರವಿಷ್ಟಿರುತ್ತದೆ, ಹೇಗೆಂದರೆ ಶಿವ ಮತ್ತು ಶವ ಶಬ್ದಗಳಲ್ಲಿರುವಷ್ಟು ಅಂತರ. ಶಿವತಂದೆಗೆ ಬದಲಾಗಿ ಶವದಲ್ಲಿ ಸಿಲುಕುತ್ತಾರೆ. ಅವರ ಭಾಷೆಯೂ ಸಹ ಬಹಳ ರಾಯಲ್ ರೂಪದ್ದಾಗಿರುತ್ತದೆ. ಸದಾ ತನ್ನನ್ನು ಪಾರು ಮಾಡಿಕೊಳ್ಳಲು ಯಾರು ಮಾಡಿದ್ದಾರೆ, ಯಾರು ನೋಡುತ್ತಾರೆ - ಈ ರೀತಿಯಾಗಿ ಸ್ವಯಂಗೆ ಸಮಾಧಾನಕೊಟ್ಟು ನಡೆಸುತ್ತಿರುತ್ತಾರೆ. ಅವರು ತಿಳಿಯುತ್ತಾರೆ - ಅನ್ಯರಿಗೆ ಮೋಸ ಮಾಡುತ್ತೇವೆ ಎಂದು, ಆದರೆ ಸ್ವಯಂ ತಾನೇ ಒಂದಕ್ಕೆ ನೂರುಪಟ್ಟು ದುಃಖವನ್ನು ಜಮಾ ಮಾಡಿಕೊಳ್ಳುತ್ತಿರುತ್ತಾರೆ. ಆದ್ದರಿಂದ ಉಡುಗೊರೆಯನ್ನು ನನ್ನದೆಂಬ ಅಧಿಕಾರ ಮತ್ತು ಮಿಕ್ಸ್ ಮಾಡುವುದನ್ನು ಸಮಾಪ್ತಿ ಗೊಳಿಸಿರಿ. ಆತ್ಮೀಯತೆ ಮತ್ತು ದಯಾಗುಣವನ್ನು ಧಾರಣೆ ಮಾಡಿಕೊಳ್ಳಿರಿ. ತನ್ನಪ್ರತಿ ಹಾಗೂ ಸರ್ವರ ಪ್ರತಿ ದಯಾಹೃದಯಿಯಾಗಿರಿ. ತಂದೆಯನ್ನು ನೋಡಿ ಮತ್ಯಾರನ್ನೂ ನೋಡದಿರಿ, ಇದರಲ್ಲಿ 'ಹೇ ಅರ್ಜುನ'ರಾಗಿರಿ, ಯಾರು ಅರ್ಜುನರಾಗುವರೋ ಅವರೇ ನಂಬರ್‌ವನ್, ಸದಾ ಈ ಸ್ಲೋಗನ್‌ನ್ನು ನೆನಪಿಟ್ಟುಕೊಳ್ಳಿರಿ ಹೇಳುತ್ತಾ ಕಲಿಸಬಾರದು, ಮಾಡಿ ಕಲಿಸಬೇಕಾಗಿದೆ. ಶ್ರೇಷ್ಠ ಕರ್ಮವನ್ನು ಮಾಡುತ್ತಾ ಕಲಿಸಬೇಕಾಗಿದೆ. ಉಲ್ಟಾಕಾರ್ಯವನ್ನು ಕಲಿಸಬಾರದು. ನಾನು ಬದಲಾಗಿ ಎಲ್ಲರನ್ನೂ ಪರಿವರ್ತನೆ ಮಾಡಿ ತೋರಿಸುತ್ತೇನೆ. ವ್ಯರ್ಥ ಮಾತುಗಳನ್ನು ಕೇಳುತ್ತಾ, ನೋಡುತ್ತಿದ್ದರೂ ಹೋಲಿಹಂಸವಾಗಿದ್ದು, ವ್ಯರ್ಥವನ್ನು ಬಿಟ್ಟು ಸಮರ್ಥವನ್ನು ಧಾರಣೆ ಮಾಡಿಕೊಳ್ಳಬೇಕು. ಸದಾ ಹೊಳೆಯುವ ವಸ್ತ್ರದಲ್ಲಿ ಶೃಂಗಾರಿತವಾಗಿರುವ

ಸುಮಂಗಲಿಯಾಗಿರಿ. ಬಾಬಾ ಮತ್ತು ನಾನು, ಇದರ ಮಧ್ಯೆ ಮೂರನೆಯವರೇ ಇಲ್ಲ. ಸದಾ ತಂದೆಯ ಮಡಿಲಿನ ಉಯ್ಯಾಲೆ ಅಥವಾ ಸರ್ವಪ್ರಾಪ್ತಿಗಳ ಉಯ್ಯಾಲೆಯಲ್ಲಿ ತೂಗಿರಿ. ಸಂಕಲ್ಪವೆಂಬ ಉಗುರನ್ನೂ ಸಹ ಮಣ್ಣಿನಲ್ಲಿ ತಾಗಬಾರದು. ಈ ವರ್ಷದಲ್ಲಿ ಏನು ಮಾಡಬೇಕೆಂದು ತಿಳಿಯಿತೆ? ಇಲ್ಲದಿದ್ದರೆ ಮಣ್ಣನ್ನೇ ಒರೆಸುತ್ತಿರುತ್ತೀರಿ, ಪ್ರಿಯತಮನು ಬಂದುಬಿಡುವನು. ಅವರು ಗುರಿಯವರೆಗೆ ತಲುಪುತ್ತಾರೆ ಮತ್ತು ತಾವು ಒರೆಸುತ್ತಾ ಇರುತ್ತೀರಿ, ಆಗ ದಿಬ್ಬಣದಲ್ಲಿರುವ ಪಟ್ಟಿಯಲ್ಲಿ ಬಂದುಬಿಡುವಿರಿ. ಸಮಯದ ನಿರೀಕ್ಷಣೆ ಮಾಡಬಾರದು, ನಾನು ಎವರೆಡಿ ಆಗಿದ್ದೇನೆ ಎಂದು ಸದಾ ಸ್ವಯಂನ್ನು ಆಫರ್ ಮಾಡಿರಿ. ಈಗ ಏನು ಮಾಡಬೇಕೆಂದು ತಿಳಿಯಿತೇ?

ಕಳೆದುಹೋದ ವರ್ಷದ ಫಲಿತಾಂಶದಲ್ಲೀಗ ಹಲವರ ಖಾತೆಯು ಸ್ಪಷ್ಟವಾಗಿಲ್ಲ. ಈಗಿನವರೆಗೂ ಹಲವರ ಹಳೆಯ ಮಚ್ಚೆಗಳಿನ್ನೂ ಉಳಿದುಕೊಂಡಿದೆ. ಔಷಧಿಯನ್ನೂ ಹಚ್ಚುತ್ತಾರೆ ಮತ್ತೆ ಮಚ್ಚೆಯನ್ನೂ ಮಾಡಿಕೊಳ್ಳುತ್ತಾರೆ. ಹಲವರಲ್ಲಂತು ಮುಂಚೆಯ ಚಿಕ್ಕಮಚ್ಚೆಯಿದೆ ಆದರೆ ಅದನ್ನು ಬಚ್ಚಿಟ್ಟು-ಬಚ್ಚಿಟ್ಟು ದೊಡ್ಡದನ್ನಾಗಿ ಮಾಡಿಬಿಟ್ಟಿದ್ದಾರೆ. ಕೆಲವರು ಬಚ್ಚಿಡುತ್ತಾರೆ ಮತ್ತು ಕೆಲವರು ಚಾಲಾಕಿಯಿಂದ ತನ್ನನ್ನು ನಡೆಸುತ್ತಾರೆ ಆದ್ದರಿಂದ ಬಹಳ ದಟ್ಟವಾದ ಮಚ್ಚೆಯಾಗಿಬಿಡುತ್ತದೆ. ಬಹಳ ಆಳವಾದ ಮಚ್ಚೆಯಾಗುತ್ತದೆಯೆಂದರೆ, ಯಾವ ವಸ್ತುವಿನ ಮೇಲೆ ಮಚ್ಚೆಯಾಗುತ್ತದೆಯೋ ಅದೇ ಹರಿದುಹೋಗುತ್ತದೆ, ಅದು ಭಲೆ ಬಟ್ಟೆಯ ಮೇಲಿರಬಹುದು ಅಥವಾ ಕಾಗದದ ಮೇಲಿರಬಹುದು. ಅದೇ ರೀತಿ ಇಲ್ಲಿಯೂ ಆಳವಾದ ಮಚ್ಚೆಯಿರುವವರು, ನಾನಿದನ್ನು ಮಾಡಿದನು ಹಾನಿಯನ್ನು ಮಾಡಿದೆನೆಂದು ಹೃದಯಬಗೆದು ಆಳಬೇಕಾಗುತ್ತದೆ. ಆ ದೃಶ್ಯವನ್ನೇನಾದರೂ ಒಂದು ನಿಮಿಷಕ್ಕಾದರೂ ನೋಡುತ್ತೀರೆಂದರೆ, ವಿನಾಶದ ಸಮಯಕ್ಕಿಂತಲೂ ಭಯಾನಕವಾಗಿರುತ್ತದೆ. ಆದ್ದರಿಂದ ಸತ್ಯವಂತರಾಗಿರಿ, ಸ್ವಚ್ಛವಾಗಿರಿ. ಈಗಲೂ ಬಾಪ್‌ದಾದಾರವರಿಗೆ ದಯೆಬರುತ್ತದೆ ಆದ್ದರಿಂದ ಪ್ರತಿನಿತ್ಯವೂ ತಮ್ಮ ರಾಜ್ಯಸಭೆಯನ್ನು ಮಾಡಿರಿ, ಕಛೇರಿ ಮಾಡಿರಿ. ಪರಿಶೀಲನೆ ಮಾಡುವುದರಿಂದ ಪರಿವರ್ತನೆ ಆಗಿಬಿಡುತ್ತೀರಿ.

**ಈ ರೀತಿ ಪರಿವರ್ತನೆಯ ಮೂಲಕ ವಿಶ್ವಪರಿವರ್ತನೆ ಮಾಡುವಂತಹ ಸದಾ ರಾಜ್ಯಾಧಿಕಾರಿ, ಸದಾ ಆತ್ಮೀಯತೆ ಮತ್ತು ದಯಾವೃತ್ತಿಯವರು, ವಿಶ್ವದಲ್ಲಿ ಸದಾ ಸುಖಿ, ಶಾಂತ ವಾಯುಮಂಡಲವನ್ನಾಗಿ ತಯಾರು ಮಾಡುವಂತಹ, ಅಲೆದಾಡುತ್ತಿರುವ ಆತ್ಮರಿಗಾಗಿ ಲೈಟ್‌ಹೌಸ್ ಮತ್ತು ಮೈಟ್‌ಹೌಸ್ ಆಗುವ ಧೃಡ ಸಂಕಲ್ಪ ಮಾಡುವವರಿಗೆ, ಹಳೆಯ ಪ್ರಪಂಚದ ಆಕರ್ಷಣೆಯಿಂದ ದೂರವಿರುವ, ಇಂತಹ ಶ್ರೇಷ್ಠ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

**ಸೇವಾಧಾರಿ ಸಹೋದರ-ಸಹೋದರಿಯರೊಂದಿಗೆ:-**

ಸೇವಾಧಾರಿ ಅರ್ಥಾತ್ ತಂದೆಯಸಮಾನರು ಎಂದು, ತಂದೆಯೂ ಸಹ ಸೇವಾಧಾರಿಯಾಗಿ ಬರುತ್ತಾರೆ ಅಂದಮೇಲೆ ಇದನ್ನೂ ತಿಳಿದುಕೊಳ್ಳಿ- ಡ್ರಾಮಾದಲ್ಲಿ ಲಾಟರಿಯಲ್ಲಿ ನನ್ನ ಹೆಸರು ಬಂದಿದೆ. ಸೇವೆಯ ಅವಕಾಶ ಸಿಗುವುದು ಅರ್ಥಾತ್ ಲಾಟರಿಯ ಹೆಸರು ಬರುವುದು. ಸದಾ ಸೇವೆಯ ಅವಕಾಶಗಳನ್ನು ತೆಗೆದುಕೊಳ್ಳುತ್ತಿರಿ. ಎಲ್ಲರ ಫಲಿತಾಂಶವೂ ಚೆನ್ನಾಗಿದೆ, ಶುಭಾಷಯಗಳು.

ಅವ್ಯಕ್ತ ಮುರಳಿ 07-02-1980.

***ವಿಚಿತ್ರ ರಾಜ್ಯಸಭೆ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಜ್ಞಾನವನ್ನು ಮತ್ತು ಸ್ವರೂಪವನ್ನು (ರೂಪ& ಬಸಂತ) ಎರಡರ ಸಮತೋಲನವನ್ನು ಇಟ್ಟುಕೊಂಡಿರುವ ಜ್ಞಾನ ಸ್ವರೂಪ.

2. ನಾನು ಸರ್ವಕರ್ಮೇಂದ್ರಿಯಗಳ ಸ್ಮೃತಿಗೆ ಅತೀತವಾಗಿ ಒಂದೇ ಆತ್ಮಿಕ ಸ್ವರೂಪದಲ್ಲಿ ಇದ್ದೇನೆ.

3. ನಾನು ಕರ್ಮವನ್ನು ಸಮಾವೇಶಗೊಳಿಸಿ ಆಕರ್ಮಿಯಾಗಿ ಕರ್ಮಾತೀತವಾಗಿದ್ದೇನೆ.

4. ನಾನು ಕರ್ಮೇಂದ್ರಿಯಾಜೀತ್ ಸ್ವರೂಪ, ಸ್ವರಾಜ್ಯಾಧಿಕಾರಿ.

5. ನಾನು ವರ್ತಮಾನದಲ್ಲಿ ಸರ್ವಕರ್ಮೇಂದ್ರಿಯಗಳ ಮೇಲೆ ರಾಜ್ಯಾಧಿಕಾರಿಯಾಗಿ ಜನ್ಮ ಜನ್ಮಾಂತರಗಳಿಗೆ ರಾಜ್ಯಾಧಿಕಾರಿಯಾಗಿದ್ದೇನೆ.

6. ನಾನು ಪ್ರಕೃತಿಯನ್ನು ದಾಸಿಯನ್ನಾಗಿ ಮಾಡಿಕೊಂಡಿರುವ ಪ್ರಕೃತಿಜೀತ್ ಸ್ವರೂಪ.

7. ನನ್ನ ರಾಜ್ಯದಲ್ಲಿನ ಅಷ್ಟ ಶಕ್ತಿಗಳನ್ನು ನನ್ನ ಆದೇಶದ ಪ್ರಕಾರ ನಡೆಸಿ ಸಮಯಕ್ಕೆ ಸಹಯೋಗವನ್ನು ಪಡೆದಿದ್ದೇನೆ.

8. ನನ್ನ ರಾಜ್ಯದಲ್ಲಿರುವ ಸಂಕಲ್ಪ ಶಕ್ತಿ, ನಿರ್ಣಯಶಕ್ತಿ, ಮತ್ತು ಸಂಸ್ಕಾರಶಕ್ತಿ( ಮನಸ್ಸು, ಬುದ್ಧಿ, ಸಂಸ್ಕಾರ) ಮೂರು ಮಹಾಮಂತ್ರಿಗಳ ಮಂತ್ರಿಮಂಡಳಿ ಸರಿಯಾಗಿ ಇದೆ.

9. ನಾನು ನನ್ನ ನಿರ್ಣಯ ಶಕ್ತಿಯಿಂದ ರಿಫೈನ್ ಆಗಿ ಧರ್ಮರಾಜಪುರಿಯಲ್ಲಿ ಸ್ವಾಗತವನ್ನು ಪಡೆಯುತ್ತಾ ಹೋಗಿದ್ದೇನೆ.

10. ನಾನು ಆತ್ಮೀಯತೆ, ದಯಾಭಾವನೆಯನ್ನು ಧಾರಣೆ ಮಾಡಿ ಸರ್ವರ ಪ್ರತಿ ದಯಾ ಹೃದಯಿ ಆಗಿದ್ದೇನೆ.

11. ನಾನು ಶ್ರೇಷ್ಠ ಕರ್ಮ ಮಾಡಿ ಕಲಿಸಬೇಕು, ನಾನು ಪರಿವರ್ತನೆಯಾಗಿ ಎಲ್ಲರನ್ನು ಪರಿವರ್ತನೆ ಮಾಡುತ್ತೇನೆ ಎಂಬ ಸೂಕ್ತಿಯನ್ನು ಸದಾ ಸ್ಮೃತಿಯಲ್ಲಿಟ್ಟುಕೊಂಡಿದ್ದೇನೆ.

12. ನಾನು ಹೋಲಿ ಹಂಸನಾಗಿ ಸಮರ್ಥವನ್ನು ಧಾರಣೆ ಮಾಡಿ ಹೊಳೆಯುವ ವಸ್ತ್ರಗಳನ್ನು ಧರಿಸಿರುವ ಸದಾ ಸುಮಂಗಲಿ.

13.ನಾನು ತಂದೆಯ ಮಡಿಲು ಮತ್ತು ಸರ್ವಪ್ರಾಪ್ತಿಗಳ ಉಯ್ಯಾಲೆಯಲ್ಲಿ ಸದಾ ತೂಗುತ್ತಿದ್ದೇನೆ.

14. ನಾನು ಸತ್ಯವಾಗಿ, ಸ್ವಚ್ಛವಾಗಿ ಇದ್ದು ಪ್ರತಿದಿನ ರಾಜ್ಯಸಭೆ, ಕಛೇರಿಯನ್ನಿಟ್ಟು ಪರಿಶೀಲಿಸಿಕೊಂಡು ಪರಿವರ್ತನೆಯಾಗಿದ್ದೇನೆ.